SRI DEVARAJ URS.—I can also take with me the Leader of the Opposition Sri Deve Gowda if he is willing. Let us go together and find out. There is no point in getting touchy about what has been done in the past.

MADAM SPEAKER.—Question DP. 491 and 776 may be taken up together.

ALLOTMENT OF A PORTION ROAD TAX TO MANGALORE CITY MUNICIPALITY

491 SRI U. T. FAREED (Mangalore).—Will the Minister for Labour be pleased to state :—

(*a*) whether South Kanara District next to Bangalore district is paying the highest road tax ;

(*b*) if so, the amount collected as road tax in S. K. district ;

(*c*) the amount allotted for the improvement of the roads in South Kanara ;

(*d*) whether they are aware that Mangalore Municipality is not in a position to take up the work of repair of roads due to paucity of funds : if so, the steps taken to allot 50 percent of the amount collected by way of road tax towards the improvement of roads ?

SRI AZEEZ SAIT (Minister for Labour).—

(*a*) Yes.

(*b*)—

Year		*Tax collection in Rupees nP*
1970-71	...	1,06,35,764-27
1971-72	...	1,17,56,936-56

(*c*) Rs. 18·04 lakhs

(*d*) No.

ALLOTMENT OF 50 PER CENT OF MOTOR VEHICLE TAX TO MUNICIPALITES AND T. D. BOARDS

SRI K. M. DORAISWAMY NAIDU (Bethamangala).—

477. (776) Will the Minister for Labour be pleased to state :—

(*a*) whether the Government is contemplating to allot at least 50 per cent of the amount of motor vehicles tax to Municipalities and Taluk Development Boards in the State to improve their financial position ;

(SRI K. M. DORAISWAMY NAIDU) :—

(*b*) if so, from which date ?

SRI AZEEZ SAIT (Minister for Labour).—

(*a*) No.

(*b*) Does not arise in view of reply to clause (*a*) above

ಶ್ರೀ ಯು. ಟಿ. ಫರೀದ್.—ಉತ್ತರದಲ್ಲಿ ಹೇಳಿರುವಂತೆ ೭೧-೭೨ನೇ ಸಾಲಿನಲ್ಲಿ ೧, ೦೭, ೫೬,೯೩೬-೫೬ ರೂಪಾಯಿ ವಾಹನ ತೆರಿಗೆ ವಸೂಲಾಗಿದ್ದರೂ ಇದರಲ್ಲಿ ಇಲ್ಲಿನ ಮುನಿಸಿಪಾಲಿಟಿಗಳಿಗಾಗಿ ಕೊಟ್ಟಿರುವ ಹಣ ಎಷ್ಟು ?

† SRI AZEEZ SAIT.—I want notice.

ಶ್ರೀ ಕೆ. ಎಂ. ದೊರಸ್ವಾಮಿನಾಯ್ಡು.—ತಾಲ್ಲೂಕು ಬೊರ್ಡುಗಳಹಾಗೂ ಮುನಿಸಿಪಾಲಿಟಿಗಳಿಗೆ ಬರುವ ಆದಾಯ ಕಡಿಮೆಯಾಗುತ್ತಿದೆ. ಇದಕ್ಕಾಗಿ ಮೋಟಾರು ವಾಹನಗಳ ತೆರಿಗೆಯ ವಸೂಲಿಯಲ್ಲಿ ಅರ್ಧದಷ್ಟನ್ನು ಎಲ್ಲ ಮುನಿಸಿಪಾಲಿಟಿಗಳಿಗೂ ಸರಕಾರ ಕೊಡಲು ಯೋಚನೆ ಮಾಡುವುದೇ ?

ಶ್ರೀ ಅಜೀಜ್‌ಸೇಟ್.—ಕೆಲವು ಮುನಿಸಿಪಾಲಿಟಿಗಳಿಗೆ ಕಾಂಪೆನ್‌ಸೇಷನ್ ಕೊಡಬೇಕೆಂದು ಸರಕಾರಕ್ಕೆ ಮನವಿಗಳು ಬಂದಿದ್ದವು. ಮೊದಲು ಕಾಂಪೆನ್‌ಸೇಷನ್ ಸರಕಾರದವರು ಕೊಡುತ್ತಿದ್ದರು. ಈಚೆಗೆ ರಿಸೋರ್ಸಸ್ ಆಂಡ್ ಎಕಾನಮಿ ಕಮಿಟಿಯವರು ಮಾಡಿದ ಶಿಫಾರಸಿನಂತೆ ಕಾಂಪೆನ್‌ಸೇಷನ್ ಕೊಡುವುದಕ್ಕೆ ಬದಲಾಗಿ ಇಂತಹ ಸಂಸ್ಥೆಗಳಿಗೆ ಗ್ರಾಂಟುಗಳ ರೂಪದಲ್ಲಿ ಕೊಡಬಹುದೆಂದು ಸಲಹೆ ಮಾಡಿದ್ದರಿಂದ ಇದನ್ನು ಸರಕಾರ ಒಪ್ಪಿದೆ ಮತ್ತು ಇದಕ್ಕೆ ತಕ್ಕ ಹಾಗೆ ಒಂದು ಬಿಲ್ಲನ್ನು ಇಲ್ಲಿ ತಂದು ಅದರಂತೆ ಎಲ್ಲ ಮುನಿಸಿಪಾಲಿಟಿಗಳಿಗೂ ಹಣ ಒದಗಿಸುವ ವ್ಯವಸ್ಥೆ ಮಾಡಲು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಜೂನಿಯರ್ ಎಂಜಿನೀಯರ್‌ಗಳ ಸಂಖ್ಯೆ ೨೨೩೬ ಮತ್ತು ಇತರ ಸೇವೆಗಳಲ್ಲಿರುವ (ಓ ಓ.ಡಿ.) ಅಧಿಕಾರಿಗಳನ್ನು ಬಿಟ್ಟು ಡಿಪ್ಲೋಮಾಧಾರರು ಹಾಗೂ ಪ್ರಮಾಣ ಪತ್ರದಾರರನ್ನೊಳಗೊಂಡಂತೆ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಡ್ರಾಫ್ಟ್ಸ್‌ಮನ್‌ಗಳ ಒಟ್ಟು ಸಂಖ್ಯೆ ೯೩೨ ಎಂದು ಏನು ಉತ್ತರದಲ್ಲಿ ಕೊಡಲಾಗಿದೆ ಅದು ಸರಿಯಾಗಿದೆ.

ಶ್ರೀ ಎಚ್. ಡಿ. ದೇವೇಗೌಡ :—(ಉ) ಪ್ರಶ್ನೆಗೆ ಉತ್ತರವಾಗಿ ಈ ಎರಡು ವರ್ಗದ ಅಧಿಕಾರಿಗಳು ಬೇರೆ ಬೇರೆ ತರಹದ ಕೆಲಸ ಮಾಡಬೇಕಾದ್ದರಿಂದ ಅವರನ್ನು ಒಂದೇ ದರ್ಜೆಗೆ ಸಮೀಕರಿಸಲಾಗುವುದಿಲ್ಲ ವೆಂದು ಉತ್ತರ ಕೊಟ್ಟಿದ್ದೀರಿ. ಡ್ರಾಫ್ಟ್ಸ್‌ಮನ್‌ರುಗಳಿಗೆ ಬಯಲುಗೆಲಸ ಮಾಡಲು ಅವಕಾಶವನ್ನೊದಗಿಸಲು ಇರತಕ್ಕಂಥ ಅಡ್ಡಿ ಆದರೂ ಏನು ? ಟೆಕ್ನಿಕಲ್ ಆಗಿ ಯಾವ ರೀತಿದುಗಾಗಿ ಅಡ್ಡಿಯಾಗುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ ; ಪದವೀಧರರಲ್ಲದ ಜೂನಿಯರ್ ಎಂಜಿನಿಯರ್ ಮತ್ತು ಸಿವಿಲ್ ಎಂಜಿಯರಿಂಗ್ ಡಿಪ್ಲೋಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಡ್ರಾಫ್ಟ್‌ಮನೆರುಗಳ ಹುದ್ದೆಗಳನ್ನು ಕಾಮನ್ ಕೇಡರ್ ಮಾಡಬೇಕೆಂದು ನಾವು ಕೇಳಿದ್ದೀರಿ. ಇವರ ಸಂಬಳ ಮತ್ತು ಗ್ರೇಡ್ ಒಂದೇ ಆದರೂ ಸಹ ಇವೆರಡು ಹುದ್ದೆಗಳಿಗೆ ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಬೇರೆ ಬೇರೆ ಇರುವುದರಿಂದ ಮತ್ತು ಕೆಲಸಗಳು ಬೇರೆ ಬೇರೆ ಇರುವುದರಿಂದ ಇವೆರಡನ್ನು ಒಂದು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ :—ಈ ರೀತಿ ಮಾಡುವುದರಿಂದ ಡ್ರಾಫ್ಟ್ಸ್‌ಮನೆರುಗಳಿಗೆ ತೊಂದರೆಯಾಗಿದೆ. ಇವರಿಗೆ ಮುಂದೆ ಪ್ರಮೋಷನ್ ಆಗುವುದು ಕಷ್ಟವಾಗುತ್ತದೆ. ಆದ್ದರಿಂದ ಇವೆರಡು ಹುದ್ದೆಗಳಿಗೆ ಕಾಮನ್ ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲದಿದ್ದರೂ, ಬಯಲುಗಲಸ ಮಾಡಲು ಅವಕಾಶವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಸಾಧ್ಯವಾಗುವುದಿಲ್ಲ. ಡ್ರಾಫ್ಟ್ಸ್‌ಮನ್ನರುಗಳಲ್ಲಿ ಎರಡು ಭಾಗಗಳಿವೆ. ಪಾಲಿಟೆಕ್ನಿಕ್‌ಗಳಲ್ಲಿ ಸರ್ಟಿಫಿಕೇಟ್ ಪಡೆದ ಡಿಪ್ಲೋಮಾದಾರರುಗಳು ಒಂದು ಭಾಗವಾದರೆ, ಮುಂಬೈ, ಪೂನಾ, ಮದ್ರಾಸ್, ಹೈದರಾಬಾದ್‌ಗಳಲ್ಲಿರತಕ್ಕ ಇಂಡಿಸ್ಟ್ರಿಯಲ್ ಟೈನಿಂಗ್ ಇನ್ಸ್‌ಟಿಟ್ಯೂಟ್‌ಗಳಲ್ಲಿ ಟ್ರೈನಿಂಗ್ ಪಡೆದು ಸರ್ಟಿಫಿಕೇಟ್ ಪಡೆದವರು ಮತ್ತೊಂದು ಭಾಗ. ಈ ರೀತಿ ಎರಡು ಗುಂಪಿನ ಜನರು ಏನಿದ್ದಾರೆ, ಇವರುಗಳ ಕೆಲಸಗಳು, ಕರ್ತವ್ಯಗಳು ಬೇರೆ ಬೇರೆ ಇರುವುದರಿಂದ, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಸಹ ಬೇರೆ ಬೇರೆಯಾಗಿವೆ. ಆದ್ದರಿಂದ ಅವರನ್ನು ಒಂದೇ ದರ್ಜೆಗೆ ಸಮೀಕರಿಸಲಾಗುವುದಿಲ್ಲ.

BENACHI AND SANGAMESHWAR TANKS

562. SRI. G. C. PATIL (Kalghatgi).—

Will the Minister for Public Works and Electricity be pleased to state :—

when the work of Benachi and Sangameshwar tanks in Kalghatgi Taluk will be completed ?

SRI H. M. CHANNABASAPPA.—(Minister for Public Works and Electricity.—

Benachi Tank.

This work has been taken up and will be completed as early as possible

Sangameshwar Tank

This work is taken up and will be completed as early as possible.

ಶ್ರೀ ಜಿ. ಸಿ. ಪಾಟೀಲ್ :—ಈ ಕಾಮಗಾರಿಗಳನ್ನು ಆದಷ್ಟು ಬೇಗನೆ ಪೂರ್ತಿಗೊಳಿಸಲಾಗುವುದು ಎಂದು ಹೇಳಿದ್ದೀರಿ. ಇದೇ ರೀತಿಯ ಉತ್ತರ ಅನೇಕ ದಿವಸಗಳಿಂದ ಬರುತ್ತಿದೆಯೇ ಹೊರತು ಕೆಲಸ ಮಾತ್ರ ಆಗಿಲ್ಲ. ಆದ್ದರಿಂದ ಇನ್ನು ಎಷ್ಟು ದಿವಸ ಅಥವಾ ತಿಂಗಳುಗಳಲ್ಲಿ ಈ ಕೆಲಸವನ್ನು ಪೂರ್ತಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಬೆಣಚಿಕೆರೆಯ ಬಗ್ಗೆ ಹೇಳುವುದಾದರೆ, ಅದು ಸರ್ಕಾರದ ಹತೋಟಿಯಲ್ಲಿ ಇಲ್ಲ. ಅದು ಡೋನರ್ಸ್ ಆರ್ಗನೈಜೇಷನ್ ಹತೋಟಿಯಲ್ಲಿ ಇದೆ. ಅವರು ಹಣ ಕೊಟ್ಟ ಹಾಗೆ ಕೆಲಸವಾಗುತ್ತಿದೆ, ಆದ್ದರಿಂದ ನಿರ್ದಿಷ್ಟವಾದ ಕಾಲವನು ಪೂರ್ತಿ ಮಾಡುವ ಬಗ್ಗೆ ಸೂಚಿಸುವುದಕ್ಕಾಗುವುದಿಲ್ಲ.

ಇನ್ನು ಸಂಗಮೇಶ್ವರ ಕೆರೆಯ ಕೆಲಸ ಪೀಸ್ ವರ್ಕ್ ಮೂಲಕ ಕೆಲವು ಕಾಲ ನಡೆಯಿತು. ಈಗ ಆ ಕೆಲಸ ವಿದ್ಯುತ್‌ವೇಗದಲ್ಲಿ ಆಗಬೇಕೆಂಬ ಕಾರಣದಿಂದ ಟೆಂಡರ್ ಕರೆದಿದ್ದೇವೆ. ಆದ ಕಾರಣ ಆದಷ್ಟು ಕೀವ್ರಗತಿಯಲ್ಲಿ ಕೆಲಸ ಮಾಡಿಸುತ್ತೇವೆ.

ಶ್ರೀ ಜಿ. ಸಿ. ಪಾಟೀಲ್ :—ಎಷ್ಟು ತಿಂಗಳಲ್ಲಿ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ದಿವಸ, ತಿಂಗಳು ಎಲ್ಲವನ್ನು ಲೆಕ್ಕ ಹಾಕಿ ಇಷ್ಟೇ ದಿವಸಗಳಲ್ಲಿ ಮಾಡಿಸಿಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಇಷ್ಟು ಮಾತ್ರ ಭರವಸೆ ಕೊಡುತ್ತೇನೆ, ಏನೆಂದರೆ, ಈ ಕೆಲಸ ನಿಧಾನವಾಗುವುದಕ್ಕೆ ಅವಕಾಶ ಕೊಡುವುದಿಲ್ಲ ಎಂಬುದನ್ನು.

ಅಧ್ಯಕ್ಷರು : ೫೭೯ನೇ ಪ್ರಶ್ನೆಯನ್ನು ಇನ್ನೊಂದು ದಿನ ತೆಗೆದುಕೊಳ್ಳುತ್ತೇನೆ ಏಕೆಂದರೆ ಮಂತ್ರಿಗಳು ಊರಿನಲ್ಲಿ ಇಲ್ಲ.